# ಗ್ಲಾಮರ್ ಓಕೆ ವಲ್ಗರ್ ಯಾಕೆ?

**‘ಬ್ಯೂಟಿಫುಲ್ ಮನಸುಗಳು’ ಚಿತ್ರದ ಮೂಲಕ ಬೆಳಕಿಗೆ ಬಂದಿರುವ ನಟಿ ಸ್ವಾತಿ ಕೊಂಡೆ. ತಮ್ಮ ನಟನಾಬದುಕಿನ ರೂಪುರೇಷೆಗಳ ಬಗ್ಗೆ ಅವರಿಗಿರುವ ಸ್ಪಷ್ಟತೆಯೇ ಅವರನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಬಲ್ಲದು.**

■ **ಪದ್ಮನಾಭ ಭಟ್**



ಜಯತೀರ್ಥ ನಿರ್ದೇಶನದ ‘ಬ್ಯೂಟಿಫುಲ್ ಮನಸುಗಳು’ ಸಹೃದಯರ ಗಮನ ಸೆಳೆದ ಸಿನಿಮಾ. ಆ ಸಿನಿಮಾದಲ್ಲಿ ನಾಯಕಿ ಶ್ರುತಿ ಹರಿಹರನ್ ಅಷ್ಟೇ ಗಮನ ಸೆಳೆದ ಮತ್ತೊಬ್ಬರು ಸ್ವಾತಿ ಕೊಂಡೆ. ಹಾಗೆ ನೋಡಿದರೆ ಅವರು ಸಿನಿಮಾದಲ್ಲಿ ಬರುವುದು ಕೊನೆಯ ಭಾಗದ ಕೆಲವು ನಿಮಿಷಗಳ ಕಾಲ ಮಾತ್ರ. ಆದರೆ ಅವರ ಅಭಿನಯ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿತ್ತು.

ತನ್ನ ಪಾತ್ರವನ್ನು ಜನರು ಅಷ್ಟೊಂದು ಮೆಚ್ಚಿಕೊಳ್ಳುತ್ತಾರೆ ಎಂದು ಸ್ವಾತಿ ಕೊಂಡೆ ಅವರಿಗೂ ಗೊತ್ತಿರಲಿಲ್ಲ. ಅಂಥ ಪ್ರಶಂಸನೆಗಳ ಗುಂಗಿನಲ್ಲಿ ಮುಳುಗಿದ್ದಾಗಲೇ ಒಂದು ರಾತ್ರಿ ಅವರ ಮೊಬೈಲ್‌ಗೆ ಕರೆ ಬಂದಿತ್ತು. ಸಹಜವಾಗಿಯೇ ರಿಸೀವ್ ಮಾಡಿದ ಅವರಿಗೆ ಅಚ್ಚರಿ ಕಾದಿತ್ತು. ಆ ಕಡೆಯಿಂದ ಮಾತನಾಡುತ್ತಿದ್ದಿದ್ದು ನಟ ಸುದೀಪ್. ‘ಬ್ಯೂಟಿಫುಲ್ ಮನಸುಗಳು’ ಸಿನಿಮಾ ನೋಡಿದ್ದ ಸುದೀಪ್, ಸ್ವಾತಿ ಅಭಿನಯವನ್ನು ಮೆಚ್ಚಿ ಕರೆಮಾಡಿ ಅಭಿನಂದನೆ ಹೇಳಿದ್ದರು.

‘ಅವತ್ತು ನಂಗೆ ಏನು ಮಾತಾಡ್ಬೇಕು ಅಂತಾನೇ ಗೊತ್ತಾಗ್ಲಿಲ್ಲ. ಥ್ಯಾಂಕ್ಯೂ ಥ್ಯಾಂಕ್ಯೂ ಅನ್ನೋದನ್ನು ಬಿಟ್ಟು ಬೇರೆ ಏನೂ ಹೇಳಿರಲಿಲ್ಲ. ಕೆಲವು ದಿನಗಳ ನಂತರ ನಮ್ಮ ಇಡೀ ತಂಡವನ್ನು ಅವರ ಮನೆಗೆ ಕರೆದು ಪಾರ್ಟಿ ಕೊಡಿಸಿದರು. ನಾನು ನಟಿಸಿದ ಮೊದಲ ಸಿನಿಮಾದಲ್ಲಿಯೇ ದೊರೆತ ಈ ಎಲ್ಲ ಅನುಭವಗಳನ್ನು ಮರೆಯಲು ಸಾಧ್ಯವೇ ಇಲ್ಲ’ ಎಂದು ಈಗಲೂ ಪುಳಕಗೊಳ್ಳುತ್ತಾರೆ ಸ್ವಾತಿ.

ಸಿನಿಮಾ ನಟಿಯಾಗಬೇಕು ಎಂಬ ಕನಸು ಕಟ್ಟಿಕೊಂಡು ಇಲ್ಲಿಗೆ ಬಂದ ಹುಡುಗಿ ಇವರಲ್ಲ. ಆಕಸ್ಮಿಕವಾಗಿಯೇ ಬಣ್ಣದ ನಂಟು ಬೆಳೆಸಿಕೊಂಡ ಇವರು ಮೊದಲು ಆಯ್ಕೆಯಾಗಿದ್ದು ‘ರಿಕ್ತ’ ಎಂಬ ಸಿನಿಮಾಗೆ. ಆದರೆ ಆ ಸಿನಿಮಾದಲ್ಲಿ ನಟಿಸಲಿಲ್ಲ. ನಂತರ ಬ್ಯೂಟಿಫುಲ್ ಮನಸುಗಳ ಭಾಗವಾದರು. ನಂತರ ’ಕಮರೊಟ್ಟು ಚೆಕ್‌ಪೋಸ್ಟ್’ ಎಂಬ ಥ್ರಿಲ್ಲರ್ ಸಿನಿಮಾದಲ್ಲಿ ನಟಿಸಿದರು. ಮತ್ತೆ ಮೊದಲ ಸಿನಿಮಾದಲ್ಲಿ ಅವಕಾಶ ಕೊಟ್ಟ ನಿರ್ದೇಶಕ ಜಯತೀರ್ಥ ಅವರೇ ತಮ್ಮ ‘ವೆನಿಲ್ಲಾ’ ಸಿನಿಮಾದಲ್ಲಿ ನಾಯಕಿಯಾಗಿಸಿದರು.

ಹೀಗೆ ಕಳೆದ ನಾಲ್ಕು ವರ್ಷಗಳಲ್ಲಿ ಸ್ವಾತಿ ಬ್ಯಾಕ್‌ಟು ಬ್ಯಾಕ್ ಸಿನಿಮಾ ಮಾಡಿರದಿದ್ದರೂ ಬಂದ ಅವಕಾಶಗಳಲ್ಲಿ ಭಿನ್ನ ಹೆಜ್ಜೆಗಳನ್ನಿಟ್ಟಿದ್ದಾರೆ. ನಿರ್ವಹಿಸಿದ ಪಾತ್ರಗಳಲ್ಲೆಲ್ಲ ತಾವೊಬ್ಬ ಪ್ರತಿಭಾವಂತ ನಟಿ ಎಂಬುದನ್ನು ಸಾಬೀತುಗೊಳಿಸಿದ್ದಾರೆ. ಸದ್ಯಕ್ಕೆ ಅವರು ‘ಭರಣಿ’ ಸಿನಿಮಾದ ಧ್ಯಾನದಲ್ಲಿದ್ದಾರೆ.

‘ಭರಣಿ’ ಪಕ್ಕಾ ಹಳ್ಳಿಗಾಡಿನ ಕಥೆ. ‘ಸಿನಿಮಾದುದ್ದಕ್ಕೂ ಲಂಗ ದಾವಣಿ ಹಾಕಿಕೊಂಡು, ಸಿಟಿಯ ಸೋಂಕೆ ಇಲ್ಲದ ಪಕ್ಕಾ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳುತ್ತೇನೆ’ ಎನ್ನುವ ಅವರು ಈ ಚಿತ್ರದ ಪಾತ್ರಕ್ಕಾಗಿ ಸಾಕಷ್ಟು ಸಿದ್ಧತೆಯನ್ನೂ ನಡೆಸಿದ್ದಾರೆ.

‘ಈ ಮೊದಲಿನ ಬಹುತೇಕ ಸಿನಿಮಾಗಳಲ್ಲಿ ಸೆಟ್‌ಗೆ ಹೋಗಿ ಅಲ್ಲಿಯೇ ಸ್ಕ್ರಿಪ್ಟ್ ಓದಿ ನಟಿಸುತ್ತಿದ್ದೆ. ಆದರೆ ಭರಣಿ ಸಿನಿಮಾದಲ್ಲಿ ಅದು ಸಾಧ್ಯವೇ ಇಲ್ಲ. ಸಿದ್ಧತೆಯಿಲ್ಲದೇ ಸೆಟ್‌ಗೆ ಹೋದರೆ ಸಂಭಾಷಣೆ ಒಪ್ಪಿಸುವುದೇ ಸಾಧ್ಯವಿಲ್ಲ. ಈ ಪಾತ್ರವೇ ಹಾಗಿದೆ’ ಎನ್ನುತ್ತಾರೆ ಸ್ವಾತಿ. ಕಳೆದ ವರ್ಷವೇ ಚಿತ್ರೀಕರಣ ಆರಂಭಿಸಿದ್ದ ಚಿತ್ರತಂಡ, ಪ್ರವಾಹದ ಕಾರಣದಿಂದ ಚಿತ್ರೀಕರಣ ನಿಲ್ಲಿಸಿತ್ತು. ಈಗ ಮತ್ತೆ ಕೆಲಸ ಶುರುಮಾಡುವ ಸಿದ್ಧತೆಯಲ್ಲಿ ಇದೆ.

‘ಒಂದು ಸಿನಿಮಾವನ್ನು ಒಪ್ಪಿಕೊಳ್ಳಬೇಕಾದರೆ ನಾನು ನೋಡುವುದು ಕಥೆ ಮತ್ತು ತಂಡ. ಇಷ್ಟೇ ಸಂಭಾವನೆ ಬೇಕು, ಇಂಥದ್ದೇ ಊಟ ಬೇಕು, ಕ್ಯಾರಾವಾನ್ ಇರಬೇಕು ಎಂದೆಲ್ಲ ಕಂಡೀಷನ್ ಇಲ್ಲವೇ ಇಲ್ಲ. ಆದರೆ ನಾನು ಯಾವುದೇ ಜಗಳ ಮನಸ್ತಾಪ ಮಾಡಿಕೊಳ್ಳಲು ಇಷ್ಟಪಡುವುದಿಲ್ಲ. ಹಾಗಾಗಿ ಒಳ್ಳೆಯ ತಂಡದ ಜೊತೆ ಕೆಲಸ ಮಾಡಲು ಬಯಸುತ್ತೇನೆ’ ಎನ್ನುವ ಅವರು ‘ಸಿನಿಮಾದಲ್ಲಿ ಪಾತ್ರದ ಜೊತೆಗೆ ನಾವು ಚೆನ್ನಾಗಿ ಕಾಣಿಸಿಕೊಳ್ಳುವುದೂ ಮುಖ್ಯ. ಹಾಗಾಗಿ ಕಾಸ್ಟ್ಯೂಮ್‌ಗೆ ಕೂಡ ನಾನು ಅಷ್ಟೇ ಮಹತ್ವ ನೀಡುತ್ತೇನೆ’ ಎಂದೂ ಹೇಳುತ್ತಾರೆ.

‘ಗ್ಲ್ಯಾಮರ್ ಪಾತ್ರದಲ್ಲಿ ಕಾಣಿಸಿಕೊಳ್ಳಲು ಹಿಂಜರಿಕೆ ಇಲ್ಲ. ಆದರೆ ಅಶ್ಲೀಲ ಪಾತ್ರ ಒಪ್ಪಿಕೊಳ್ಳಲಾರೆ. ನಾನು ಚಿಕ್ಕವಳಿರಬಹುದು. ಆದರೆ ನನ್ನ ಒಂದೊಂದು ಹೆಜ್ಜೆಯನ್ನೂ ಇಲ್ಲಿ ಎಲ್ಲರೂ ಗಮನಿಸುತ್ತಿರುತ್ತಾರೆ. ಹಾಗಾಗಿ ಒಮ್ಮೆ ಎಡವಿದರೆ ಎದ್ದೇಳುವುದು ಕಷ್ಟ. ತುಂಬ ಯೋಚಿಸಿ ಸರಿಯಾದ ನಿರ್ಧಾರ ಕೈಗೊಳ್ಳುವುದು ಮುಖ್ಯ’ ಎನ್ನುವ ವಿವೇಕ ಸ್ವಾತಿ ಅವರಿಗಿದೆ. ■